

# 2025 ಸರಿಯುವ ಮುನ್ನ...

# ಚಲಿಸಿದ ಕಾಲವೂ ತೋರಿದ ಆಟವೂ...

ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ

**2025, ಭಾರತದ ಕ್ರೀಡಾರಂಗಕ್ಕೆ ಮಹತ್ವದ್ದಾಗಿತ್ತು. ಈ ವರ್ಷದ ಆಗುಹೋಗುಗಳನ್ನೊಮ್ಮೆ ಮೆಲುಕು ಹಾಕಿದರೆ, ವಿಶ್ವ ಮಟ್ಟದ ಸಾಧನೆಗಳು ಸಂತಸ ಮೂಡಿಸುತ್ತವೆ. ವಿವಾದಗಳು, ಕಾಲ್ತುಳಿತದಂಥ ಪ್ರಕರಣಗಳು ನೋವಿನ ಛಾಯೆಯನ್ನು ಉಳಿಸುತ್ತವೆ.**

■ ಗಿರೀಶ ದೊಡ್ಡಮನಿ

2025ನೇ ವರ್ಷವು ಇತಿಹಾಸದ ಕಾಲಗರ್ಭಕ್ಕೆ ಸರಿಯಲಿದೆ. ಒಂದಷ್ಟು ಸಿಹಿ, ಮತ್ತೊಂದಿಷ್ಟು ಕಹಿ ನೆನಪುಗಳನ್ನು ಕೊಟ್ಟು ಮರೆಯಾಗುತ್ತಿದೆ. ಚಲಿಸಿದ ಈ ಕಾಲಘಟ್ಟವು ಹತ್ತಾರು ಪಾಠಗಳನ್ನೂ ಕಲಿಸಿದೆ. ಅದರಲ್ಲೂ ಆಟದಂಗಳಕ್ಕೆ ಈ ವರ್ಷವು ಮಹತ್ವದ್ದಾಗಿತ್ತು. ಈ ವರ್ಷದ ಡೈರಿಯ ಒಂದೊಂದೇ ಪುಟವನ್ನು ತಿರುವಿ ಹಾಕಿದರೆ ವಿಶ್ವ ಮಟ್ಟದ ಸಾಧನೆಗಳು ಮೂಡಿದ ಸಂತಸ ಒಂದೆಡೆಯಾದರೆ; ಖ್ಯಾತನಾಮರ ನಿವೃತ್ತಿಯ ನಿರಾಸೆ ಇನ್ನೊಂದೆಡೆ. ವಿವಾದಗಳ ಬಿಸಿ, ಕಾಲ್ತುಳಿತದ ಕರಾಳತೆ ಮೈನಡುಗಿಸುತ್ತವೆ. ಒಟ್ಟಾರೆ ಭಾರತದ ಕ್ರೀಡಾರಂಗ ಈ ವರ್ಷ ಒಂದಿಲ್ಲೊಂದು ಕಾರಣಕ್ಕೆ ಸದಾ ಸುದ್ದಿಯಲ್ಲಿತ್ತು.

## ಕ್ರಿಕೆಟ್‌ನಲ್ಲಿ ಸಿಹಿ-ಕಹಿ

ಈ ವರ್ಷ ಭಾರತದ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡಗಳು ಅಮೋಘ ಸಾಧನೆಗಳನ್ನು ಮಾಡಿದವು. ಅದರಲ್ಲೂ ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ ಪಾರಮ್ಯ ಮೆರೆದವು. ಜೊತೆಗೆ ವಿವಾದಗಳು ಮತ್ತು ನಿರಾಶೆಗಳೂ ಕಾಡಿದವು.

ಫೆಬ್ರುವರಿಯಲ್ಲಿ ರೋಹಿತ್ ಶರ್ಮಾ ಬಳಗವು ಏಕದಿನ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದುಕೊಂಡಿತು. 2013ರ ನಂತರ ಭಾರತ ತಂಡದಿಂದ ಮೂಡಿಬಂದ ಸಾಧನೆ ಇದು. ಈ ಬಾರಿ ಪಾಕಿಸ್ತಾನ ಈ ಟೂರ್ನಿಯ ಆತಿಥ್ಯ ವಹಿಸಿತ್ತು. ಆದರೆ ರಾಜತಾಂತ್ರಿಕ ಕಾರಣಗಳಿಂದಾಗಿ ಭಾರತ ತಂಡವು ಪಾಕ್ ನೆಲದಲ್ಲಿ ಪಂದ್ಯಗಳನ್ನು ಆಡಲು ನಿರಾಕರಿಸಿತು.

ಇದರಿಂದಾಗಿ ಭಾರತದ ಎಲ್ಲ ಪಂದ್ಯಗಳನ್ನೂ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ಆಡಿಸಲಾಯಿತು. ಟೂರ್ನಿಯ ಲೀಗ್ ಹಂತದಲ್ಲಿ ಪಾಕ್ ತಂಡವನ್ನು ಸೋಲಿಸಿದ ಭಾರತ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಗೆದ್ದಿತು. ಮುಖ್ಯ ಕೋಚ್ ಆಗಿ ಗೌತಮ್ ಗಂಭೀರ್ ಅವರು ಬಂದ ಮೇಲೆ ಭಾರತ ತಂಡವು ಮಾಡಿದ ದೊಡ್ಡ ಸಾಧನೆ ಇದಾಗಿತ್ತು.



ಐಪಿಎಲ್ ಟ್ರೋಫಿಯೊಂದಿಗೆ ಆರ್‌ಸಿಬಿ ತಂಡ